**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 427 ಎಸಿಎಂ(2) 2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:07-08-2017.

**-:: ಸು ತ್ತೋಲೆ ::-**

**ವಿಷಯ:** 2017-18ನೇ ಸಾಲಿನಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶ ಸಂಬಂಧ ರಾಜ್ಯದ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಕೋರ್ಸುಗಳಲ್ಲಿ ಖಾಲಿ ಉಳಿದಿರುವ ಸೀಟುಗಳಿಗೆ **ಆಫ್-ಲೈನ್** ಮುಖಾಂತರ ಅರ್ಜಿ ಪಡೆಯಲು ಹಾಗೂ ಸ್ವೀಕರಿಸಲು **ಅವಧಿ ವಿಸ್ತರಿಸುವ** ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ. ಇಡಿ 207 ಟಿಜಿಎಲ್ 2016, ದಿ:20-03-2017.
2. ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ. ಡಿಟಿಇ/427/ಎಸಿಎಂ(2)/2016-17, ದಿ:09-05-2017.
3. ಈ ಕಛೇರಿ ಸುತ್ತೋಲೆ ಸಂ. ಡಿಟಿಇ/427/ಎಸಿಎಂ(2)/2016-17, ದಿ:15-07-2017 & 26-07-2017.
4. ಸರ್ಕಾರದ ಆದೇಶ ಸಂ. ಇಡಿ 59 ಟಿಇಪಿ 2016, ದಿ:27-07-2016.
5. ಹಲವು ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳ ಮನವಿ.

-000000-

2017-18ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಉಲ್ಲೇಖ(2) & (3)ರ ಈ ಕಛೇರಿ ಪ್ರವೇಶಾಧಿಸೂಚನೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಗೆ ಪ್ರವೇಶ ಅರ್ಜಿಗಳನ್ನು ನೀಡುವ ಹಾಗೂ ಸ್ವೀಕರಿಸುವ ಸಂಬಂಧ ಅಂತಿಮ ದಿನಾಂಕವನ್ನು 02-08-2017 ಎಂದು ನಿಗಧಿಪಡಿಸಿ, ದಿ:03-08-2017ರ ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಪ್ರಾಂಶುಪಾಲರ ಹಂತದಲ್ಲಿ ಪೂರ್ಣಗೊಳಿಸಲು ತಿಳಿಸಲಾಗಿತ್ತು.

ಉಲ್ಲೇಖ(5)ರ ಪ್ರಿನ್ಸಿಪಾಲರುಗಳ ಮನವಿ ಪತ್ರದಲ್ಲಿ ಬಾಕಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಸ್ವೀಕರಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿರುತ್ತಾರೆ. ಈ ಸಂಬಂಧದಲ್ಲಿ ಪ್ರಿನ್ಸಿಪಾಲರ ಮನವಿಯನ್ನು ಪರಿಗಣಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ **ಆಫ್-ಲೈನ್** ಮುಖಾಂತರ ಆಯಾ ಕಾಲೇಜುಗಳಲ್ಲಿ ಖಾಲಿ ಇರುವ ಸೀಟುಗಳಿಗೆ **(ಎಸ್‌ಎನ್‌ಕ್ಯೂ ಕೋಟಾ ಸೀಟುಗಳನ್ನು ಹೊರತುಪಡಿಸಿ)** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಪಡೆದು ಹಾಗೂ ಮೆರಿಟ್ ಪಟ್ಟಿ ತಯಾರಿಸಿ ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ರೋಸ್ಟರ್ ಅನುಗುಣವಾಗಿ ನಿಯಮಗಳನ್ನು ಪಾಲಿಸಿ ತುಂಬಲು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ **ಈ ಕೆಳಕಂಡಂತೆ ಅವಧಿಯನ್ನು ವಿಸ್ತರಿಸಿ** ಅನುಮತಿ ನೀಡಲಾಗಿದೆ.

| ಕ್ರ ಸಂ. | ಪ್ರವೇಶಕ್ಕೆ ಸಂಬಂಧಿಸಿದ ವಿವರ | | ವೇಳಾಪಟ್ಟಿ |
|---|---|---|---|
| 1. | ಅರ್ಜಿ ಪಡೆಯಲು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ವಿಸ್ತರಿಸಲಾದ ದಿನಾಂಕ: | – | **11-08-2017ರ ಸಂಜೆ 5.30 ಗಂಟೆಯ ವರೆಗೆ** |
| 2. | **ಕಾಲೇಜಿನ ಸೂಚನಾ ಫಲಕದಲ್ಲಿ MS-EXCEL Format ನಲ್ಲಿ ತಯಾರಿಸಿ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಪ್ರಕಟಿಸುವ ದಿನಾಂಕ:** | – | **12-08-2017ರ ಪೂರ್ವಾಹ್ನ 11.00 ಗಂಟೆಗೆ** |

| | | | |
|---|---|---|---|
| 3. | ಆಫ್-ಲೈನ್ ಕೌನ್ಸಲಿಂಗ್ ಮುಖಾಂತರ ಪ್ರವೇಶ ಪ್ರಕ್ರಿಯೆಯನ್ನು ನಡೆಸುವ ದಿನಾಂಕ: | – | ದಿನಾಂಕ:12-08-2017 ರ ಮಧ್ಯಾಹ್ನ 12.00 ಘಂಟೆಗೆ |
| 4. | ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ಕಾಲೇಜಿನಲ್ಲಿಯೇ ಮೂಲ ದಾಖಲೆಗಳು/ಪ್ರವೇಶ ಶುಲ್ಕದೊಂದಿಗೆ ಸಂದರ್ಶನಕ್ಕೆ ಹಾಜರಾಗಿ ಸೀಟು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯಲು ಅಂತಿಮ ದಿನಾಂಕ: | – | ದಿನಾಂಕ:12-08-2017ರ ಸಂಜೆ 05.30 ಗಂಟೆಯ ಒಳಗೆ. |

**ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಜಿ ಪಡೆಯುವ ಹಾಗೂ ಸಲ್ಲಿಸುವ ವಿಧಾನ:**

(ಅ) **ಅರ್ಜಿ ಪಡೆಯುವ ವಿಧಾನ:**

ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ದಿನಾಂಕ:11-08-2017 ರ ವರೆಗೆ ಅರ್ಜಿ ನಮೂನೆ ಹಾಗೂ ಮಾಹಿತಿ ಪುಸ್ತಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕೃತ ವೆಬ್‌ಸೈಟ್‌ಗಳ ಮೂಲಕ www.dte.kar.nic.in & www.kea.kar.nic.in ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ವಯ ಸಂಪೂರ್ಣ ಭರ್ತಿ ಮಾಡುವುದು. **ಅರ್ಹ ಅಭ್ಯರ್ಥಿಗಳು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಲಾದ ಅರ್ಜಿಯನ್ನು ಪ್ರವೇಶ ಬಯಸುವ ತಮ್ಮ ಇಚ್ಛೆಗನುಗುಣವಾದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿಯೇ ದಿ:11-08-2017 ರ ಸಂಜೆ 5.30 ಗಂಟೆಯ ಒಳಗಾಗಿ ಸಲ್ಲಿಸತಕ್ಕದ್ದು.**

(ಆ) **ಅರ್ಜಿ ನೊಂದಣಿ ಶುಲ್ಕ:**

₹ 100/- (ಸಾಮಾನ್ಯ, 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ)

₹ 50/- (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-1ರ ಅಭ್ಯರ್ಥಿಗಳಿಗೆ)

ಕರ್ನಾಟಕ ರಾಜ್ಯದ ಯಾವುದೇ **STATE BANK OF INDIA** ಶಾಖೆಗಳಲ್ಲಿ ಈ ಕೆಳಕಂಡ ಕೋಷ್ಠಕದಲ್ಲಿನ ಖಾತೆಗೆ ಪಾವತಿಸಿ BANK CHALLAN (counterfoil) ನ್ನು ಪಡೆದು ಪ್ರವೇಶ ಬಯಸುವ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿಯೇ ಸಲ್ಲಿಸುವುದು.

| *ಬ್ಯಾಂಕ್* | *ಖಾತೆಯ ಹೆಸರು* | *ಖಾತೆ ಸಂ.* | ***IFSC Code*** |
|---|---|---|---|
| **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಲ್ಲೇಶ್ವರಂ ಶಾಖೆ, ಬೆಂಗಳೂರು** | **'ED-KEA-DCET-2017 Application Fee Collection Account** | **36843662415** | **SBIN0007080** |

(ಇ) **ಅರ್ಜಿ ಸಲ್ಲಿಸುವ ವಿಧಾನ:**

ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು **ಪ್ರವೇಶ ಬಯಸುವ ತಮ್ಮ ಇಚ್ಛೆಗನುಗುಣವಾದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿಯೇ ದಿ:11-08-2017 ರ ಸಂಜೆ 5.30 ಗಂಟೆಯ ಒಳಗಾಗಿ** ಎಲ್ಲಾ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳ ಸಹಿತ ಹಾಗೂ ಇತ್ತೀಚಿನ 04 ಪಾಸ್ ಪೋರ್ಟ್ ಅಳತೆಯ ಫೋಟೋಗಳೊಂದಿಗೆ ಸಲ್ಲಿಸಬಹುದಾಗಿದೆ.

**ಪ್ರವೇಶ ಬಯಸುವ ಅಭ್ಯರ್ಥಿಗಳು ಸಂದರ್ಶನ ಸಮಯದಲ್ಲಿ ಈ ಕೆಳಕಂಡ ಎಲ್ಲಾ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.**

ಅ) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆಯಾಗಿ ಶೇ. 35 ಅಂಕಗಳನ್ನು ಪಡೆದ ಅಭ್ಯರ್ಥಿಯ ಮೂಲ ಅಂಕಪಟ್ಟಿ.

ಆ) ಮೂಲ ವರ್ಗಾವಣೆ ಪ್ರಮಾಣ ಪತ್ರ.

ಇ) ಕರ್ನಾಟಕದಲ್ಲಿ 01ನೇ ತರಗತಿಯಿಂದ 10ನೇ ವರ್ಷಗಳ ವರೆಗೆ ಕನಿಷ್ಠ 05 ವರ್ಷ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು.

ಈ) 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು. ಹಾಗೂ ಕನ್ನಡ ಮಾಧ್ಯಮ / ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. (ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು **"ಪರಿಶೀಲನಾ ಪ್ರಮಾಣ ಪತ್ರ"** ಸಲ್ಲಿಸತಕ್ಕದ್ದು).

ಉ) ಮೀಸಲಾತಿಯಡಿ ಕ್ಲೇಮು ಮಾಡುವ ಅಭ್ಯರ್ಥಿಗಳು ಮೂಲ ಜಾತಿ ಪ್ರಮಾಣ ಪತ್ರವನ್ನು ಮತ್ತು ಆದಾಯ ಪ್ರಮಾಣ ಪತ್ರವನ್ನು ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ಮೀಸಲಾತಿ/ಆದಾಯ ಪ್ರಮಾಣ ಪತ್ರ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಗಳ ಪ್ರಕಾರ ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳನ್ನು ಪೂರೈಸಿದ್ದಲ್ಲಿ ಸಾಮಾನ್ಯ ಗುಂಪಿನಡಿ ಪರಿಗಣಿಸಲಾಗುವುದು.

ಊ) ವೈದ್ಯಕೀಯ ಪ್ರಮಾಣ ಪತ್ರವನ್ನು ನೊಂದಾಯಿಸಿದ ಅಧೀಕೃತ ವೈದ್ಯರಿಂದ ಪಡೆದು ಸಲ್ಲಿಸಬೇಕು.

ಋ) ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 04 ಭಾವಚಿತ್ರಗಳು.

**ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಶುಲ್ಕ:**

ಸರ್ಕಾರದ ಆದೇಶ ಸಂ. ಇಡಿ 64 ಟಿಪಿಇ 2016, ದಿ:21–06–2016 ರನ್ವಯ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕೆಳಗೆ ನಿಗಧಿಪಡಿಸಿರುವ ಶುಲ್ಕವನ್ನು ಪ್ರವೇಶ ಸಮಯದಲ್ಲಿ ನಗದು ರೂಪದಲ್ಲಿ ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದಲ್ಲಿ ಪ್ರವೇಶಕ್ಕೆ ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್ | ₹ 2,800/- | ₹ 500/- | ₹ 830/- | ₹ 4,130/- |
| 2. | ಅನುದಾನಿತ ಪಾಲಿಟೆಕ್ನಿಕ್ | ₹ 5,350/- | ₹ 500/- | ₹ 830/- | ₹ 6,680/- |

* ಎನ್.ಎಸ್.ಎಸ್ ಘಟಕ ಇರುವ ಸಂಸ್ಥೆಗಳು ಮೇಲ್ಕಂಡ ಇತರೆ ಶುಲ್ಕದ ಜೊತೆಗೆ ರೂ.40/–ನ್ನು ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.

** ಎನ್.ಎಸ್.ಎಸ್ ಘಟಕ ಇಲ್ಲದ ಸಂಸ್ಥೆಗಳು ಮೇಲ್ಕಂಡ ಇತರೆ ಶುಲ್ಕದ ಜೊತೆಗೆ ರೂ.50/–ನ್ನು ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.

**ಮೇಲೆ ನಮೂದಿಸಿರುವಂತೆ ಇಂದೇ / ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ನಿಯಮಗಳ ಪ್ರಕಾರ ದಿ:12–08–2017ರ ರೊಳಗೆ ಪ್ರವೇಶ ಪ್ರಕ್ರಿಯೆಯನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳು ತಮ್ಮ ಹಂತದಲ್ಲಿಯೇ ಅರ್ಹ ಅಭ್ಯರ್ಥಿಗಳ ಆಫ್–ಲೈನ್ ಮುಖಾಂತರ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸತಕ್ಕದ್ದು. ಪ್ರವೇಶಾವಧಿಯನ್ನು ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ**

ಪಡೆದ ಅಭ್ಯರ್ಥಿಗಳ ಸಂಬಂಧದಲ್ಲಿ ನಿಯಮಾನುಸಾರ ಕನಿಷ್ಠ ಹಾಜರಾತಿಯನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ. ಸದರಿ ಅಭ್ಯರ್ಥಿಗಳಿಗೆ ಪ್ರಥಮ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸಲು ಸೂಕ್ತ ವ್ಯವಸ್ಥೆ ಮಾಡುವುದಲ್ಲದೆ, ಮೇಲ್ಕಂಡ ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಪಠ್ಯಕ್ರಮದನ್ವಯ ನಿಗಧಿತ ಪಾಠ ಪ್ರವಚನಗಳನ್ನು ಮುಗಿಸುವಲ್ಲಿ ಕ್ರಮತೆಗೆದುಕೊಂಡು ನಿರ್ದೇಶನಾಲಯಕ್ಕೆ ವರದಿ ಮಾಡುವುದು.

ಪ್ರಥಮ ಡಿಪ್ಲೋಮಾ ಪ್ರವೇಶಾವಧಿಯನ್ನು ಪುನಃ ವಿಸ್ತರಿಸಲಾಗುವುದಿಲ್ಲ. ಪ್ರಯುಕ್ತ, ಇದನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ **080-2235 6949** ದೂರವಾಣಿಯನ್ನು ಸಂಪರ್ಕಿಸುವುದು.

ನಿರ್ದೇಶಕರು

ರಾಜ್ಯದ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ – ಸದರಿ ಸುತ್ತೋಲೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಹಾಗೂ ಸ್ಥಳೀಯ ದಿನಪತ್ರಿಕೆಯಲ್ಲಿ ಜಾಹಿರಾತು ನೀಡಿ ನಿಯಮಗಳ ಪ್ರಕಾರ ರೋಸ್ಟರ್ ಮತ್ತು ಮೆರಿಟ್‌ಗನುಗುಣವಾಗಿ ತಮ್ಮ ಹಂತದಲ್ಲಿಯೇ **ದಿ:12-08-2017ರ** ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

**ಪ್ರತಿ:**

1. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ
2. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ
3. ಪಿಆರ್‌ಓ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
4. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಪತ್ರಿಕಾ ಪ್ರಕಟಣೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
5. ನಿರ್ದೇಶಕರ ಆಪ್ತಶಾಖೆಗೆ.
6. ನಿರ್ದೇಶಕರ ಆಪ್ತಶಾಖೆಗೆ